Language and Literacy

TESS India

# Pair work for language and literacy

# ಭಾಷೆ ಮತ್ತು ಸಾಕ್ಷರತೆಗಾಗಿ ಜೋಡಿ ಕೆಲಸ





Teacher Education through School-based Support in India
www.TESS-India.edu.in

http://creativecommons.org/licenses/

The Open University

UKaid from the British people

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹತ್ವಾಕಾಂಕ್ಷೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ(ತರಬೇತುದಾರರಿಗೆ) ಸಹಾಯ ಹಸ್ತ ನೀಡುವುದೇ ಟೆಸ್-ಇಂಡಿಯಾ OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು 'ವಿದ್ಯಾರ್ಥಿ'ಗಳೆಂದು ಪರಿಗಣಿಸಿ, ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್- ಇಂಡಿಯಾ OERನಲ್ಲಿನ ಮಾದರಿಯಂತೆ, ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್-ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ(ತರಬೇತುದಾರರಿಗೆ) ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್- ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು, ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು, ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL13TESSKNV1*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

## ಈ ಘಟಕದಲ್ಲೇನಿದೆ?

ಈ ಘಟಕ ನಿಮ್ಮ ಭಾಷಾ ಪಾಠಗಳಲ್ಲಿ ಜೋಡಿಕೆಲಸವನ್ನು ಯೋಜಿಸುವ ಮತ್ತು ನಿರ್ವಹಿಸುವ ವಿಧಾನಗಳಿಗೆ ಒತ್ತು ನೀಡುತ್ತಿದೆ. ಹಲವು ವೈವಿಧ್ಯಮಯ ಚಟುವಟಿಕೆಗಳಲ್ಲಿ ಸ್ನೇಹಪರ, ಸಹಭಾಗಿತ್ವದ ಕಲಿಕೆಗಾಗಿ ಅವಕಾಶಗಳನ್ನು ಒದಗಿಸುವ ಜೋಡಿಕೆಲಸ ನಿಮ್ಮ ಬೋಧನಾ ಭಂಡಾರದಲ್ಲಿ ಬಹಳ ಪರಿಣಾಮಕಾರಿಯಾದ ಸಾಧನವಾಗಬಹುದು.

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಿಮ್ಮ ಭಾಷಾ ಪಾಠಗಳಲ್ಲಿ ಜೋಡಿಕೆಲಸವನ್ನು ಯೋಜಿಸಿ, ನಿರ್ವಹಿಸುವುದು.
- ನಿಮ್ಮ ತರಗತಿ ನಿರ್ವಹಣಾ ತಂತ್ರಗಳ ಭಂಡಾರವನ್ನು ವಿಸ್ತರಿಸುವುದು.
- ವಿದ್ಯಾರ್ಥಿಗಳ ಭಾಷೆ ಮತ್ತು ಸಾಕ್ಷರತೆ ಬೆಳವಣಿಗೆಯನ್ನು ಮೌಲ್ಯಾಂಕನ ಮಾಡಲು ಜೋಡಿ ಕೆಲಸವನ್ನು ಒಂದು ಅವಕಾಶವಾಗಿ ಬಳಸುವುದು.

## ಈ ಮಾರ್ಗ ಏಕೆ ಮುಖ್ಯ?

ನಿತ್ಯಜೀವನದಲ್ಲಿ ಜನರು ಒಬ್ಬರ ಜೊತೆ ಇನ್ನೊಬ್ಬರು, ಮಾತನಾಡಿ ಮತ್ತು ಕೇಳಿಸಿಕೊಂಡು, ಗಮನಿಸುತ್ತಾ, ಬೆಂಬಲಿಸುತ್ತಾ, ಸಲಹೆಗಳನ್ನು ನೀಡುತ್ತಾ ಮತ್ತು ಪರಸ್ಪರರಿಗೆ ಸಹಾಯ ಮಾಡುತ್ತಾ ಕಾರ್ಯನಿರ್ವಹಿಸುತ್ತಾರೆ. ಈ ರೀತಿಯ ಸಹಭಾಗಿತ್ವ ವಿಚಾರ ವಿನಿಮಯವನ್ನು ಪ್ರೋತ್ಸಾಹಿಸುತ್ತದೆಯಲ್ಲದೆ, ಕೆಲಸಗಳನ್ನು ವಿಭಿನ್ನರೀತಿಯಲ್ಲಿ ಮಾಡಲು ಅವಕಾಶ ಮಾಡಿಕೊಡುತ್ತದೆ. ತರಗತಿ ಶಿಕ್ಷಕ-ಕೇಂದ್ರಿತವಾಗಿದ್ದರೆ, ವಿದ್ಯಾರ್ಥಿಗಳಿಗೆ ಅನ್ವೇಷಣೆ, ಚರ್ಚೆ, ಪ್ರಶ್ನೆ, ಪ್ರಯೋಗಗಳ ಮೂಲಕ ಹಾಗೂ ಸಹಜವಾಗಿ, ಪರಸ್ಪರರಿಗೆ ಅನುಕೂಲವಾಗುವ ರೀತಿಯಲ್ಲಿ ಕಲಿಯಲು ಸಿಗುವ ಅವಕಾಶಗಳು ಕಡಿಮೆ. ಭಾಷಾ ಪಾಠಗಳಲ್ಲಿ ಮಾತು-ಆಧಾರಿತ ಕಲಿಕಾ ಅವಕಾಶಗಳನ್ನು ಒದಗಿಸಲು, ಜೋಡಿಕೆಲಸವನ್ನು ಉಪಯೋಗಿಸುವುದು ಒಂದು ಪರಿಣಾಮಕಾರಿ ವಿಧಾನ.

ಜೋಡಿಕೆಲಸವು ಎಲ್ಲಾ ವಯಸ್ಸಿನವರಿಗೂ ಹಾಗೂ ಎಲ್ಲಾ ವಿಷಯಗಳಿಗೂ ಸೂಕ್ತವಾಗಿದೆ. ಒಂದೇ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಮಾತನಾಡಲು ಅವಕಾಶ ಮಾಡಿಕೊಡುವುದರಿಂದ, ಇದು ಹೆಚ್ಚಿನ ವಿದ್ಯಾರ್ಥಿಗಳಿರುವ ತರಗತಿಗಳಲ್ಲೂ ಪರಿಣಾಮಕಾರಿಯಾಗಿರುವುದು. ಎಲ್ಲಾ ವಿದ್ಯಾರ್ಥಿಗಳೂ ಮಾತನಾಡಲೇ ಬೇಕಾದ್ದರಿಂದ ಇದು ಎಲ್ಲರನ್ನೂ ಒಳಗೊಳ್ಳುತ್ತದೆ. ವಿದ್ಯಾರ್ಥಿಗಳ ಅಗತ್ಯಗಳಿಗೆ ಅನುಗುಣವಾಗಿ ಜೋಡಿಗಳನ್ನು ಸಂಘಟಿಸಬಹುದಾದ್ದರಿಂದ, ಬಹುಭಾಷೆಯ, ಬಹುವರ್ಗದ ವಿದ್ಯಾರ್ಥಿಗಳ ತರಗತಿಯಲ್ಲಿ ವಿಶೇಷವಾಗಿ ಉಪಯುಕ್ತವಾಗುತ್ತದೆ. ಒಂದೇ ಮಟ್ಟದ ಗಳಿಕಾ ಸಾಮರ್ಥ್ಯವಿರುವ ಅಥವಾ ಬೇರೆ ಬೇರೆ ಮಟ್ಟವಿರುವ, ಒಂದೇ ಮನೆ ಭಾಷೆಯಿದ್ದು ಸ್ನೇಹಿತರಾಗಿರುವ ಅಥವಾ ಯಾವುದೇ ನಿರ್ದಿಷ್ಟ ಕ್ರಮವಿಲ್ಲದೇ ಹೇಗೆಬೇಕಾದರೂ ವಿದ್ಯಾರ್ಥಿಗಳನ್ನು ಜೋಡಿ ಮಾಡಬಹುದು. ಜೋಡಿ ಮಾಡುವ ಕ್ರಮದಲ್ಲಿ ಬದಲಾವಣೆಗಳಾಗುತ್ತಿದ್ದರೆ ಪರಿಣಾಮಕಾರಿ ಕಲಿಕೆಗೆ ಉತ್ತೇಜನ ಸಿಗುವುದಲ್ಲದೇ, ತರಗತಿಯ ಸಂಬಂಧಗಳು ಉತ್ತಮಗೊಳ್ಳುತ್ತವೆ.

## 1 ಜೋಡಿ ಕೆಲಸವನ್ನು ನೀವೇಕೆ ಉಪಯೋಗಿಸಬೇಕು?

ಚಟುವಟಿಕೆ 1, ನಿಮ್ಮ ಭಾಷಾಪಾಠಗಳಲ್ಲಿ ಜೋಡಿಕೆಲಸವನ್ನು ಬಳಸುವುದರ ಕುರಿತು ಆಲೋಚಿಸುವುದನ್ನು ಪ್ರೋತ್ಸಾಹಿಸುತ್ತದೆ.

### ಚಟುವಟಿಕೆ 1 : ತರಗತಿಯಲ್ಲಿ ಜೋಡಿಕೆಲಸ ಉಪಯೋಗಿಸುವುದರ ಕುರಿತು ಚಿಂತನೆ

ಸಾಧ್ಯವಾದರೆ, ಸಹೋದ್ಯೋಗಿಯೊಂದಿಗೆ ಸಂಪನ್ಮೂಲ-1 ‘ ಜೋಡಿಕೆಲಸವನ್ನು ಉಪಯೋಗಿಸುವುದು ‘ ಓದಲು ಆರಂಭಿಸಿ. ನೀವು ಶಿಕ್ಷಕರಾಗಿ ನಿಮಗೆ ಪ್ರಮುಖ ಕಲಿಕೆ ಅನ್ನಿಸಿದ ಅಂಶಗಳನ್ನು ಗೆರೆ ಎಳೆದು ಗುರುತಿಸಿ.

ನೀವು ಇತ್ತೀಚೆಗೆ ಮಾಡಿದ ಒಂದು ಅಥವಾ ಎರಡು ಪಾಠಗಳ ಕುರಿತು ಆಲೋಚಿಸಿ. ಇದು ಭಾಷೆ ಅಥವಾ ನಿರ್ದಿಷ್ಟ ವಿಷಯವಸ್ತು ಕುರಿತಾಗಿರಬಹುದು

- ಅಲ್ಲಿ ಜೋಡಿಕೆಲಸಕ್ಕೆ ಅವಕಾಶಗಳಿದ್ದವೇ? ಹಾಗಿದ್ದಲ್ಲಿ, ಅವು ಯಾವುವು?
- ವಿದ್ಯಾರ್ಥಿಗಳು ಜೋಡಿಯಾಗಿ ಕೆಲಸ ಮಾಡಲು ದೊರಕಿದ ಈ ಅವಕಾಶಗಳನ್ನು ಬಳಸಿಕೊಂಡಿರಾ? ಹಾಗಿದ್ದಲ್ಲಿ, ಅವು ಎಷ್ಟರಮಟ್ಟಿಗೆ ಯಶಸ್ವಿಯಾದವು?
- ಒಂದು ವೇಳೆ ಜೋಡಿಕೆಲಸ ನಿಮಗೆ ಹೊಸದಾಗಿದ್ದರೆ, ಇದನ್ನು ತರಗತಿಯಲ್ಲಿ ಅನುಷ್ಠಾನ ಮಾಡುವ ಕುರಿತು ನಿಮಗಿರುವ ಸಂದೇಹಗಳು ಯಾವುವು?

**ವಿಡಿಯೋ: ಜೋಡಿ ಕಾರ್ಯದ ಬಳಕೆ Using pair work**

## 2 ಜೋಡಿಕೆಲಸದ ಉದಾಹರಣೆ ಪಾಠಗಳು

ಕೆಳಗಿನ ಪ್ರಸಂಗ ಅಧ್ಯಯನದಲ್ಲಿ ಶಿಕ್ಷಕರೊಬ್ಬರು ಪದ್ಯ ಬರವಣಿಗೆ ಚಟುವಟಿಕೆಯಲ್ಲಿ ಜೋಡಿಕೆಲಸವನ್ನು ಅನುಸರಿಸಿರುವುದನ್ನು ನೀವು ಓದಲಿದ್ದೀರಿ.

### ಪ್ರಸಂಗ ಅಧ್ಯಯನ 1: ಪದ್ಯ ತರಗತಿಯಲ್ಲಿ ಜೋಡಿಕೆಲಸದ ಬಳಕೆ

*ಅಂಕಪ್ಪ ನಂಜನಗೂಡು ಬಳಿಯ ಒಂದು ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಎಂಟನೇ ತರಗತಿ ವಿದ್ಯಾರ್ಥಿಗಳ ಬರವಣಿಗೆ ಸಾಮರ್ಥ್ಯದ ಮಟ್ಟದಲ್ಲಿ ಬಹಳ ವ್ಯತ್ಯಾಸಗಳಿವೆ. ವಿದ್ಯಾರ್ಥಿಗಳು ಪದ್ಯ ಬರೆಯುವುದನ್ನು ಅನುಕೂಲಿಸಲು ಜೋಡಿಕೆಲಸವನ್ನು ಉಪಯೋಗಿಸಿದ ರೀತಿಯನ್ನು ಅವರು ವಿವರಿಸಿದ್ದಾರೆ.*

ನನ್ನ ವಿದ್ಯಾರ್ಥಿಗಳು, ಜಿ. ಎಸ್. ಶಿವರುದ್ರಪ್ಪ ಮತ್ತು ನಿಸಾರ್ ಅಹಮದ್ ಅವರ ಕೆಲವು ಕವಿತೆಗಳನ್ನು ಗಟ್ಟಿಯಾಗಿ ಓದುತ್ತಿದ್ದರು. ಅವರು ಈಗಾಗಲೇ ಕೆಲವು ಕವಿತೆಗಳನ್ನು ಸ್ವತಃ ಬರೆದಿದ್ದಾರೆ. ಈ ಸಲ ಅವರಿಗೆ ಜೋಡಿಗಳಲ್ಲಿ ಬರವಣಿಗೆ ಕೆಲಸ ಕೊಡುವುದೆಂದು ನಿರ್ಧರಿಸಿದೆ. ಅವರ ಅನುಭವಕ್ಕೆ ಬಂದಿರುವಂತಹ ವಿಷಯ (ಸ್ನೇಹಿತರೊಂದಿಗೆ ವಾದ)ವನ್ನು ಆಯ್ದುಕೊಂಡೆ. ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕ ವಿಷಯವನ್ನು ಅವರಿಗೆ ಪರಿಚಯಿಸಿದೆ. ಆ ಪ್ರಶ್ನೆಗಳು ಯಾವುವೆಂದರೆ:

- ನಿಮ್ಮ ಸ್ನೇಹಿತನೊಂದಿಗೆ ಇತ್ತೀಚಿಗೆ ಮೂಡಿದ ಭಿನ್ನಾಭಿಪ್ರಾಯ ಯಾವುದು? ಇದು ಯಾವಾಗ ಆಯಿತು?
- ವಾದ ಚಿಕ್ಕದಾಗಿತ್ತೇ ಅಥವಾ ದೊಡ್ಡದೇ?
- ಅದರ ಕುರಿತು ನಿನ್ನ ಭಾವನೆ ಏನು?
- ಆ ಭಿನ್ನಾಭಿಪ್ರಾಯ ಪರಿಹಾರವಾಯಿತೇ?
- ಹಾಗಿದ್ದಲ್ಲಿ, ಅದು ಹೇಗಾಯಿತು? ಅದಕ್ಕೆ ಎಷ್ಟು ಸಮಯ ಬೇಕಾಯಿತು?
- ಇಲ್ಲದಿದ್ದಲ್ಲಿ, ಈಗಲೂ ಅದು ಪರಿಹಾರವಾಗಬೇಕೆಂದು ನೀನು ಬಯಸುತ್ತಿರುವೆಯಾ?
- ನಿನ್ನ ಗೆಳೆತನ ಈಗಲೂ ಮೊದಲಿನಂತೆಯೇ ಇದೆಯೇ?

ವಿಷಯದ ಮೇಲೆ ಬಹಳ ಚರ್ಚೆ ನಡೆಯಿತು. ಹಲವು ವಿದ್ಯಾರ್ಥಿಗಳು ಭಾಗವಹಿಸಿದರು. ಅವರ ಬರವಣಿಗೆಯಲ್ಲಿ ಉಪಯೋಗಕ್ಕೆ ಬರಲು ಸಾಧ್ಯವಿರುವ ಕೆಲವು ಪದ ಮತ್ತು ವಾಕ್ಯಾಂಶಗಳನ್ನು ಕಪ್ಪುಹಲಗೆಯ ಮೇಲೆ ಬರೆದೆ.

ನಂತರ, ಜೋಡಿಯಾಗಿ ಕೆಲಸಮಾಡಿ, 'ವಾದ'ದ ಮೇಲೆ ಕವಿತೆ ಬರೆಯುವಂತೆ ಹೇಳಿದೆ. ಪಕ್ಕ ಕುಳಿತಿರುವ ಸಹಪಾಠಿಯೊಂದಿಗೆ ಕಾರ್ಯನಿರ್ವಹಿಸುವಂತೆ ಜೋಡಿಗಳ ವ್ಯವಸ್ಥೆ ಮಾಡಿದೆ. ಒಬ್ಬರಾದಮೇಲೆ ಒಬ್ಬರು ಕವಿತೆಯ ಒಂದೊಂದು ಸಾಲನ್ನು ಸರತಿಯಲ್ಲಿ ಕಟ್ಟಿ, ಕಟ್ಟುತ್ತಿರುವಾಗಲೇ ಅದನ್ನು ಬರೆದುಕೊಳ್ಳುವಂತೆ ತಿಳಿಸಿದೆ. 30 ನಿಮಿಷಗಳ ನಂತರ, ಪೂರ್ಣಗೊಳಿಸಿದ ಅಥವಾ ಭಾಗಶಃ ಇರುವ ಕವಿತೆಯನ್ನು ವಾಚಿಸಲು ಪ್ರತಿಜೋಡಿಯಿಂದ ಸ್ವ ಇಚ್ಛೆಯಿಂದ ಬರುವ ವಿದ್ಯಾರ್ಥಿಯನ್ನು ಆಹ್ವಾನಿಸಿದೆ.

ಒಂದು ಜೋಡಿ ಬರೆದ ಕವಿತೆ ಇಲ್ಲಿದೆ:

**'ವಾದ'**

ನನ್ನ ಗೆಳತಿ ಅಂಕಿತಾಳೊಂದಿಗೆ ವಾದವಾಯಿತು.
ಆಕೆ ವಯಸ್ಸಾದ ವ್ಯಕ್ತಿಗೆ ಏನೋ ಹೇಳುತ್ತಿದ್ದಾಗ, ದೇವಸ್ಥಾನದ ಬಳಿ ಇದ್ದೆವು.
ಆ ವ್ಯಕ್ತಿ ಬಡವ ಮತ್ತು ಅಶುದ್ಧವಾಗಿದ್ದರು.
ಆದರೆ ನನ್ನ ಗೆಳತಿ ಅವರೊಂದಿಗೆ ನಿರ್ದಯೆಯಿಂದ ನಡೆದುಕೊಂಡಳು.
ಆಕೆ ಹೇಳಿದ್ದು ತಪ್ಪೆಂದು ನಾನು ಅವಳಿಗೆ ಹೇಳಿದೆ.
'ಚಿಂತಿಸುವುದಿಲ್ಲ' ಎಂದಳು.
ನನಗೆ ಆ ವ್ಯಕ್ತಿಯ ಕುರಿತು ಕರುಣೆ ಮೂಡಿತು.
ಒಂಟಿಯಾಗಿ ಅಲ್ಲಿಂದ ಬಂದುಬಿಟ್ಟೆ.

ವಿದ್ಯಾರ್ಥಿಗಳು ಬರೆದ ಕವಿತೆಗಳಲ್ಲಿ, ಅವರ ಅನುಭವ ಮತ್ತು ತಿಳುವಳಿಕೆಗೆ ಬಂದ ಸನ್ನಿವೇಶ ಹಾಗೂ ಭಾವನೆಗಳಿದ್ದವು. ಜೋಡಿಯಾಗಿ ನಡೆದ ಮಾತು-ಕತೆ, ವಿಚಾರಗಳನ್ನು ಹಂಚಿಕೊಳ್ಳುವ ಅವಕಾಶ ಸೃಷ್ಟಿಸಿ, ಆ ವಿಚಾರಗಳನ್ನು ಬರಹ ರೂಪಕ್ಕೆ ತರಲು ನೆರವಾಯಿತು.

ಜೋಡಿಕೆಲಸವನ್ನು ಉಪಯೋಗಿಸುವಾಗ, ಚಟುವಟಿಕೆಗಳನ್ನು ಆದಷ್ಟು ಚಿಕ್ಕದಾಗಿರುವಂತೆ ನೋಡಿಕೊಳ್ಳುತ್ತೇನೆ. ಏಕೆಂದರೆ ಯಾರೊಂದಿಗೆ ತಾವು ಜೊತೆಯಾಗುತ್ತೇನೆ ಎಂದು ಚಿಂತಿಸದೇ, ನಿಗದಿತ ಸಮಯದಲ್ಲಿ ಕೊಟ್ಟ ಕಾರ್ಯವನ್ನು ಮುಗಿಸುವಂತೆ ಅವರು ಗಮನಹರಿಸಲು ಸಾಧ್ಯವಾಗುತ್ತದೆ. ಈ ರೀತಿ ಕೆಲಸ ಮಾಡಲು ಅವರಿಗೆ ಅಭ್ಯಾಸವಾಗಿದೆ ಎಂಬುದನ್ನು ಗಮನಿಸಿದ್ದೇನೆ.

**ಚಿಂತನೆಗೊಂದು ಕ್ಷಣ**

- ವಿದ್ಯಾರ್ಥಿಗಳು ಜೋಡಿಗಳಲ್ಲಿ ಕೆಲಸ ಮಾಡಲು 'ವಾದ' ಎನ್ನುವ ವಿಷಯ ಉತ್ತಮ ಆಯ್ಕೆ ಎಂದು ನಿಮಗನ್ನಿಸುತ್ತದೆಯೇ? ಈ ವಿಷಯಕ್ಕೆ ಸಂಬಂಧಿಸಿದಂತೆ ಲೋಪದೋಷಗಳೇನಾದರೂ ಇವೆಯೇ?
- ನೀವು ಓದಿದ ಸಂಪನ್ಮೂಲ-1ರ ಕುರಿತು ಆಲೋಚಿಸಿ. ಅಂಕಪ್ಪನವರ ತರಗತಿ ಒಳಗೊಳ್ಳುವ ತರಗತಿ ಎಂದು ನಿಮಗನ್ನಿಸುತ್ತದೆಯೇ? ಎಲ್ಲಾ ವಿದ್ಯಾರ್ಥಿಗಳು ತರಗತಿ ಚರ್ಚೆ ಮತ್ತು ಜೋಡಿಯಾಗಿ ಬರೆಯುವ ಚಟುವಟಿಕೆಯ ಭಾಗವಾಗಿದ್ದಂತೆ ಭಾವಿಸಿದ್ದರೆಂದು ಎನ್ನುವುದು ಅವರಿಗೆ ಹೇಗೆ ಗೊತ್ತಿತ್ತು?
- ಈ ಪಾಠವನ್ನು ನೀವು ಮಾಡುವುದಾಗಿದ್ದರೆ, ಬರವಣಿಗೆ ಚಟುವಟಿಕೆಗಾಗಿ ಜೋಡಿಗಳನ್ನು ಹೇಗೆ ವ್ಯವಸ್ಥೆ ಮಾಡುತ್ತಿದ್ದಿರಿ: ಒಂದೇ ಅಥವಾ ಭಿನ್ನ ಕಲಿಕಾ ಮಟ್ಟದವರು, ಅಥವಾ ಒಂದೇ ಮನೆಭಾಷೆಯನ್ನು ಆಡುವವರು, ಅಥವಾ ಸ್ನೇಹಿತರು, ಅಥವಾ ನೀವು ಇಚ್ಛಿಸಿದಂತೆಯೇ? ನಿಮ್ಮ ಆಯ್ಕೆಯನ್ನು ಸಮರ್ಥಿಸಿ.
- ಕವಿತೆ ಬರೆಯಲಿಕ್ಕೆ ಆಸಕ್ತಿಯಿಲ್ಲದ ಅಥವಾ ಆತ್ಮವಿಶ್ವಾಸವಿಲ್ಲದ ವಿದ್ಯಾರ್ಥಿಗಳನ್ನು ಈ ಚಟುವಟಿಕೆಯಲ್ಲಿ ತೊಡಗಿಸಲು ಹೇಗೆ ಪ್ರೋತ್ಸಾಹಿಸುತ್ತೀರಿ?

ಮುಂದಿನ ಪ್ರಸಂಗ ಅಧ್ಯಯನದಲ್ಲಿ, ಶಿಕ್ಷಕರು ಬರವಣಿಗೆ ಕಾರ್ಯಕ್ಕೆ ಬೆಂಬಲವಾಗಿ ಜೋಡಿಗಳಲ್ಲಿ ಸಂಭಾಷಣೆಯನ್ನು ಯೋಜಿಸುತ್ತಾರೆ.

## ಪ್ರಸಂಗ ಅಧ್ಯಯನ 2: ನಾಗರ ಹಾವು ಮತ್ತು ಮುಂಗುಸಿ

*ಅಶ್ವಿನಿ ಕೊಡಗಿನ ಒಂದು ಶಾಲೆಯಲ್ಲಿ ಶಿಕ್ಷಕಿ. ಇಲ್ಲಿ ಅವರು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಜೋಡಿ ಚಟುವಟಿಕೆ ಕೈಗೊಂಡಿದ್ದನ್ನು ವಿವರಿಸಿದ್ದಾರೆ.*

ಸ್ಥಳೀಯ ಪ್ರಾಣಿಗಳ ಕುರಿತು ನನ್ನ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಕೀಟ, ಪಕ್ಷಿ, ಎರೆಹುಳು, ಹಾವು, ಹಲ್ಲಿ ಮತ್ತು ಏಡಿಗಳನ್ನು ಮುಂಗುಸಿಗಳು ತಿನ್ನುತ್ತವೆ ಎಂದು ಅವರಿಗೆ ಗೊತ್ತಿತ್ತು. ಮುಂಗುಸಿಗಳು ಬಹಳ ಚುರುಕು. ಅವುಗಳಿಗಿರುವ ದಪ್ಪ ಚರ್ಮ ಹಾವಿನ ವಿಷವನ್ನು ತಡೆಯಬಲ್ಲದು. ನಾಗರಹಾವುಗಳು ತಮ್ಮ ಕತ್ತಿನಿಂದ ಅಗಲ-ಚಪ್ಪಟೆಯಾದ ಹೆಡೆಯನ್ನು ಬಿಚ್ಚಬಲ್ಲವು ಎಂದು ಅವರಿಗೆ ಗೊತ್ತಿತ್ತು. ಅವುಗಳಿಗೆ ಪ್ರಾಣಭಯ ಉಂಟುಮಾಡಿದಾಗ, ಬುಸುಗುಡುವುದು ಅವುಗಳ ಎದುರಾಳಿಯನ್ನು ಎಚ್ಚರಿಸುವ ರೀತಿ. ಹಾವುಗಳು ಸಾಮಾನ್ಯವಾಗಿ ಇತರ ಹಾವು, ಸಣ್ಣ

ಪ್ರಾಣಿ ಮತ್ತು ಪಕ್ಷಿಗಳನ್ನು ತಿನ್ನುತ್ತವೆ.

ಈ ವಿಷಯ ವಸ್ತುವಿಗೆ ಸಂಬಂಧಿಸಿದಂತೆ, ನಾನು ಒಂದು ಭಾಷಾಪಾಠವನ್ನು ಯೋಜಿಸಿದೆ. ನಾಗರಹಾವು ಮತ್ತು ಮುಂಗುಸಿಗಳ ರೂಪ ಮತ್ತು ಜೀವನದ ಬಗ್ಗೆ ವಿದ್ಯಾರ್ಥಿಗಳನ್ನು ಪ್ರಶ್ನಿಸಲು ಆರಂಭಿಸಿದೆ. ಆ ಕೆಲವು ಪ್ರಶ್ನೆಗಳು ಹೀಗಿವೆ:

- 'ಅವು ಹೇಗೆ ಕಾಣುತ್ತವೆ?'
- 'ಅವು ಏನನ್ನು ತಿನ್ನುತ್ತವೆ?'
- 'ಅವುಗಳಲ್ಲಿ ಒಂದು ಇನ್ನೊಂದನ್ನು ಕಂಡಾಗ ಹೇಗೆ ಪ್ರತಿಕ್ರಿಯಿಸುತ್ತವೆ?'

ನಾನು ಪ್ರಮುಖ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆದೆ: ಚುರುಕು, ಬುಸುಗುಡು, ದಪ್ಪ ಚರ್ಮ, ಎಚ್ಚರಿಕೆ ಮತ್ತು ಹಾವಿನ ವಿಷ. ಪಾಠದ ಈ ಭಾಗ 15 ನಿಮಿಷಗಳನ್ನು ತೆಗೆದುಕೊಂಡಿತು.

ನಂತರ ಪಕ್ಕದ ಸಹಪಾಠಿಯೊಂದಿಗೆ ಕಾರ್ಯನಿರತವಾಗುವಂತೆ ವಿದ್ಯಾರ್ಥಿಗಳಿಗೆ ಹೇಳಿದೆ. ಒಬ್ಬರು ನಾಗರಹಾವು ಎಂದು, ಮತ್ತೊಬ್ಬರು ಮುಂಗುಸಿ ಎಂದು ನಿರ್ಧರಿಸುವಂತೆ ಹೇಳಿದೆ ಹಾಗೂ ಕಾಡಿನಲ್ಲಿ ಭೇಟಿಯಾದಾಗ, ಏನು ಹೇಳುತ್ತೀರೆಂದು ಆಲೋಚಿಸಬೇಕೆಂದು ಹೇಳಿದೆ. 15 ನಿಮಿಷಗಳನ್ನು ಕೊಟ್ಟು, ಎರಡು ಪ್ರಾಣಿಗಳ ಸಂಭಾಷಣೆಯನ್ನು ಚರ್ಚಿಸಲು ಸೂಚನೆ ನೀಡಿದೆ, ಅವರು ಇಚ್ಛಿಸಿದಲ್ಲಿ, ಆಂಗಿಕ ಭಾಷೆ, ನಟನೆ ಮತ್ತು ಧ್ವನಿ ಬದಲಾಯಿಸಿ ಸಂಭಾಷಿಸಬಹುದೆಂದು ಹೇಳಿದೆ. ಕೆಲವು ವಿದ್ಯಾರ್ಥಿಗಳು ಸಂಭಾಷಣೆಗೆ ತಮ್ಮ ಮನೆಭಾಷೆಯನ್ನು ಅಥವಾ ಮನೆಭಾಷೆ ಮತ್ತು ಶಾಲಾ ಭಾಷೆಗಳೆರಡನ್ನು ಬಳಸಿಕೊಳ್ಳ ಬಯಸಿದರು. ಅವರು ಕಾರ್ಯನಿರತರಾಗಿದ್ದಾಗ, ಪರಿವೀಕ್ಷಿಸುತ್ತಾ, ಅವರ ಮನವಿಯಂತೆ, ಪ್ರಮುಖ ಪದಗಳನ್ನು ಹಲಗೆಯ ಮೇಲೆ ಬರೆಯತೊಡಗಿದೆ. ಅನೇಕ ವಿದ್ಯಾರ್ಥಿಗಳು ಪಾತ್ರಗಳಿಗೆ ಜೀವತುಂಬಿ ಮಾತನಾಡುತ್ತಿದ್ದರು.



**ಚಿತ್ರ 1. ನಾಗರಹಾವು ಮತ್ತು ಮುಂಗುಸಿಯ ಚಟುವಟಿಕೆಯಲ್ಲಿ ತೊಡಗಿರುವುದು**

ಅನಂತರ ಇಡೀ ತರಗತಿಯ ಮುಂದೆಪಾತ್ರಾಭಿನಯವನ್ನು ಮಾಡುವಂತೆ ಜೋಡಿಗಳಿಗೆ ಹೇಳಿದೆ. ಹಿಂಜರಿಕೆಯಿರುವ ಕೆಲವರನ್ನೂ ಪ್ರೋತ್ಸಾಹಿಸಲು ಪ್ರಯತ್ನಿಸಿದೆ. ಇತರ ವಿದ್ಯಾರ್ಥಿಗಳು ಗಮನವಿಟ್ಟು ಕೇಳಿಸಿಕೊಂಡರಲ್ಲದೇ, ಪ್ರದರ್ಶನದ ಬಳಿಕ ಚಪ್ಪಾಳೆ ತಟ್ಟಿದರು. ಸಂಭಾಷಣೆಯು ಮನೆಭಾಷೆಯಲ್ಲಿದ್ದಾಗ, ಆ ನಂತರ ಶಾಲೆಭಾಷೆಗೆ ಬದಲಾಯಿಸಬೇಕೆಂದು ಇತರ ವಿದ್ಯಾರ್ಥಿಗಳಿಗೆ ತಿಳಿಸಿದೆ. ಪ್ರಸ್ತುತಪಡಿಸುವುದಕ್ಕಾಗಿ 30 ನಿಮಿಷಗಳನ್ನು ನೀಡಿದೆ.

ಕೊನೆಯದಾಗಿ, ತಮ್ಮ ಅಭ್ಯಾಸ ಪುಸ್ತಕಗಳಲ್ಲಿ ಸಂಭಾಷಣೆಯನ್ನು ಬರೆಯುವಂತೆ ತಿಳಿಸಿ, 15 ನಿಮಿಷಗಳನ್ನು ನೀಡಿದೆ.

**ಚಿಂತನೆಗೊಂದು ಕ್ಷಣ**

- ನಿಮ್ಮ ಶಾಲಾ ಸನ್ನಿವೇಶದಲ್ಲಿ ಪಾಠದ ವಿವಿಧ ಭಾಗಗಳಿಗೆ ಅಶ್ವಿನಿಯವರು ನೀಡಿದಂತೆ ಸಮಯ ಸಾಕಾಗುತ್ತದೆಯೇ? ಕ್ರಮವಾಗಿ ಬರುವ ಎರಡು ದಿನಗಳಲ್ಲಿನ ಎರಡು ಅವಧಿಗಳಿಗೆ ತಕ್ಕಂತೆ ಈ ಸಮಯವನ್ನು ಹೇಗೆ ಹೊಂದಿಸಿಕೊಳ್ಳುತ್ತೀರಿ?
- ಈ ಚಟುವಟಿಕೆಯಲ್ಲಿ ಮನೆಭಾಷೆಯನ್ನು ಬಳಸಿದ ವಿದ್ಯಾರ್ಥಿಗಳಿಗೆ ಅಶ್ವಿನಿಯವರು ಇನ್ನು ಯಾವ ರೀತಿ ಸಹಾಯ ಮಾಡಬಹುದಿತ್ತು?
- ವಿದ್ಯಾರ್ಥಿಗಳನ್ನು ಪರಿವೀಕ್ಷಿಸಿ, ಮೌಲ್ಯಾಂಕನ ಮಾಡಿ, ಅವರಿಗೆ ಸಹಾಯ ಮಾಡಲು ಅಶ್ವಿನಿಯವರಿಗೆ ಪಾಠದ ಪ್ರತಿ ಭಾಗವು ಹೇಗೆ ಅವಕಾಶ ಮಾಡಿಕೊಟ್ಟಿತು ಎಂಬುದನ್ನು ಟಿಪ್ಪಣಿ ಮಾಡಿ.
- ಈ ಮಾತು ಮತ್ತು ಬರವಣಿಗೆ ಚಟುವಟಿಕೆಗೆ ಅಶ್ವಿನಿಯವರು ಓದುವಿಕೆಯನ್ನು ಯಾವ ರೀತಿಯಲ್ಲಿ ಸೇರಿಸಬಹುದಿತ್ತು?

ಜೋಡಿಕೆಲಸವು ವಿದ್ಯಾರ್ಥಿಗಳನ್ನು ಪರಿವೀಕ್ಷಿಸಲು ಮತ್ತು ಮೌಲ್ಯಾಂಕನ ಮಾಡಲು ಅನೇಕ ಅವಕಾಶಗಳನ್ನು ಒದಗಿಸುತ್ತದೆ. ಪರಿವೀಕ್ಷಣೆ (Monitoring) ಇವುಗಳನ್ನು ಒಳಗೊಂಡಿದೆ:

- ತರಗತಿಯಲ್ಲಿ ಓಡಾಡುತ್ತಾ, ಗಮನಿಸುವುದು ಮತ್ತು ಆಲಿಸುವುದು.
- ಸೂಚನೆಗಳನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡಿರುವುದನ್ನು ಹಾಗೂ ಉದ್ದೇಶಕ್ಕನುಗುಣವಾಗಿ ಕಾರ್ಯನಿರ್ವಹಿಸುತ್ತಿರುವರೇ ಎಂದು ಪರಿಶೀಲಿಸುವುದು.
- ಉತ್ತಮ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಥವಾ ನಿರ್ವಹಿಸದ ವಿದ್ಯಾರ್ಥಿಗಳ ಟಿಪ್ಪಣಿ ಮಾಡುವುದು.
- ಹೊಗಳಿಕೆ, ಸಹಾಯ ಮತ್ತು ಪ್ರೋತ್ಸಾಹ ನೀಡುವುದು.
- ಸಾಮಾನ್ಯ ತಪ್ಪುಗಳನ್ನು ಗುರುತಿಸುವುದು.



**ಚಿತ್ರ 2: ಜೋಡಿಕೆಲಸವನ್ನು ಪರಿವೀಕ್ಷಿಸುವುದು**

ಮೌಲ್ಯಾಂಕನವು ಕೆಳಗೆ ಕೊಟ್ಟಿರುವ ರೀತಿಗಳಲ್ಲಿ ವಿದ್ಯಾರ್ಥಿಗಳ ಭಾಷಾ ಬೆಳವಣಿಗೆಗೆ ಸಂಬಂಧ ಕಲ್ಪಿಸಬಹುದು.

- ಮನೆ ಅಥವಾ ಶಾಲಾ ಭಾಷೆಯಲ್ಲಿ ಮಾತನಾಡುವಾಗ ಸೂಕ್ತಪದಗಳು ಮತ್ತು ಭಾವಾಭಿವ್ಯಕ್ತಿಯ ಬಳಕೆ.
- ಇದನ್ನು ಬರವಣಿಗೆಗೆ ಇಳಿಸುವ ಸಾಮರ್ಥ್ಯ.
- ಜೋಡಿ ಸಹಯೋಗಕ್ಕೆ ಅವರ ಕೊಡುಗೆಯ ಸ್ವರೂಪ.

- ಕಲ್ಪನೆ
- ತಮ್ಮ ಸಹಪಾಠಿಗಳೊಂದಿಗೆ ಕಾರ್ಯ ನಿರ್ವಹಿಸುವ ಸಾಮರ್ಥ್ಯ.

ಪ್ರಮುಖ ಸಂಪನ್ಮೂಲವಾದ 'ಪ್ರಗತಿ ಮತ್ತು ಕಾರ್ಯ ನಿರ್ವಹಣೆಯ ಮೌಲ್ಯಾಂಕನ'ವು ತರಗತಿಯಲ್ಲಿ ನಿಮ್ಮ ವಿದ್ಯಾರ್ಥಿಗಳನ್ನು ಮೌಲ್ಯಾಂಕನ ಮಾಡುವ ಹೆಚ್ಚಿನ ಕ್ರಮಗಳನ್ನು ತಿಳಿಸುತ್ತದೆ.



**ವಿಡಿಯೋ: Assessing progress and performance**

## 3 ಜೋಡಿಕೆಲಸದ ಪಾಠ ಯೋಜನೆ

ಈಗ ಚಟುವಟಿಕೆ 2ನ್ನು ಪ್ರಯತ್ನಿಸಿ

### ಚಟುವಟಿಕೆ 2: ಜೋಡಿಕೆಲಸದ ಪಾಠ ಯೋಜನೆ

ಈ ಚಟುವಟಿಕೆಯಲ್ಲಿ ನೀವು 20 ನಿಮಿಷಗಳಿಗೆ ಕಡಿಮೆ ಇಲ್ಲದಂತೆ ಜೋಡಿಕೆಲಸವನ್ನು ಹೊಂದಿರುವ ಪಾಠವನ್ನು ಯೋಜಿಸಲಿದ್ದೀರಿ. ಸಂಪನ್ಮೂಲ 1 ರಲ್ಲಿನ ವಿವಿಧ ಕಾರ್ಯಗಳ ಉದಾಹರಣೆಗಳನ್ನು ಗಮನಿಸಿ.

- ಆಲೋಚಿಸಿ-ಜೋಡಿಯಾಗಿ-ಹಂಚಿಕೊಳ್ಳಿ
- ಮಾಹಿತಿಯನ್ನು ಹಂಚಿಕೊಳ್ಳುವುದು
- ಆಲಿಸುವಿಕೆಯಂತಹ ಕೌಶಲಗಳನ್ನು ಅಭ್ಯಾಸ ಮಾಡುವುದು
- ಸೂಚನೆಗಳನ್ನು ಅನುಸರಿಸುವುದು
- ಕಥೆ ಹೇಳುವಿಕೆ ಅಥವಾ ಪಾತ್ರಾಭಿನಯ

ಸಂಪನ್ಮೂಲ 1 ಹಾಗೂ ಪ್ರಸಂಗ ಅಧ್ಯಯನ 1 ಮತ್ತು 2 ರಲ್ಲಿನ ವಿಚಾರ ಮತ್ತು ಮಾರ್ಗದರ್ಶನಗಳನ್ನು ಉಪಯೋಗಿಸಿಕೊಂಡು, ವಿದ್ಯಾರ್ಥಿಗಳು ಮಾತನಾಡಲು ಮತ್ತು ಬರೆಯಲು ಇಷ್ಟ ಪಡಬಹುದಾದ ವಿಷಯ ವಸ್ತುವನ್ನು ಆರಿಸಿಕೊಳ್ಳಿ. ಇದು ತರಗತಿಯ ಭಾಷಾ ಪಠ್ಯಪುಸ್ತಕ, ಅಥವಾ ಇತರ ವಿಷಯ, ಸಮುದಾಯದಲ್ಲಿನ ಇತ್ತೀಚಿನ ಹಬ್ಬ ಉತ್ಸವ, ಅಥವಾ ಸ್ಥಳೀಯ/ರಾಷ್ಟ್ರೀಯ ಸುದ್ದಿಯನ್ನು ಆಧರಿಸಿರಬಹುದು. ಜೋಡಿ ಕೆಲಸಕ್ಕೆ ಮುಂಚಿತವಾಗಿ, ನಿಮ್ಮ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಕೊಡಬಹುದಾದ 'ಓದು' ಯಾವುದಿರಬಹುದು ಹಾಗೂ ಕೆಲಸದ ನಂತರ ಕೊಡಬೇಕಾದ ಓದುವಿಕೆ ಅವಕಾಶಗಳನ್ನು ಕುರಿತು ಆಲೋಚಿಸಿ.



**ಚಿತ್ರ 3 ಜೋಡಿಕೆಲಸದ ಪಾಠ ಯೋಜನೆ ಸಿದ್ಧತೆ.**

ಆರಂಭದಲ್ಲಿ ಎಚ್ಚರಿಕೆಯಿಂದ ನಿಮ್ಮ ತರಗತಿಯನ್ನು ಸಿದ್ಧಗೊಳಿಸುವುದು ಮುಖ್ಯ.

1. ನೀವು ವಿದ್ಯಾರ್ಥಿಗಳನ್ನು ಜೋಡಿಯಾಗಿ ಕೂರಿಸುವ ಮುಂಚಿತವಾಗಿ, ಅವರು ಏನು ಮಾಡಲಿದ್ದಾರೆ ಎಂದು ವಿವರಿಸಿ.
2. ಅವರಿಂದ ಏನನ್ನು ನಿರೀಕ್ಷಿಸುತ್ತೀರೋ ಅದನ್ನು ಯಥಾಪ್ರಕಾರ ಒಬ್ಬ ವಿದ್ಯಾರ್ಥಿಯ ಸಹಾಯದಿಂದ ಪ್ರದರ್ಶಿಸಿ.
3. ಅವರ ತಿಳುವಳಿಕೆಯನ್ನು ಪರೀಕ್ಷಿಸಲು, ಕೆಲವು ವಿದ್ಯಾರ್ಥಿಗಳಿಗೆ ಇದನ್ನು ಮತ್ತೆ ನಿಮಗೆ ವಿವರಿಸಲು ಹೇಳಿ. ಈ ವಿವರಣೆ, ಅವರು ಇಚ್ಛಿಸಿದಲ್ಲಿ, ಅವರ ಮನೆಭಾಷೆಯಲ್ಲಿಯೇ ಇರಬಹುದೆಂದು ಹೇಳಿ.
4. ಜೋಡಿಯಲ್ಲಿ ಮೆದುವಾಗಿ ಮಾತನಾಡುವುದನ್ನು ತೋರಿಸಿಕೊಡಿ. ಆದರೂ ತರಗತಿಯಲ್ಲಿ ಒಂದು ಮಟ್ಟದವರೆಗಿನ ಗಲಾಟೆಯು ವಿದ್ಯಾರ್ಥಿಗಳು ಕಾರ್ಯಮಗ್ನರಾಗಿರುವುದರ ಸಂಕೇತವೆಂದು ನೀವು ಒಪ್ಪಿಕೊಳ್ಳಲೇಬೇಕು.
5. ಚಟುವಟಿಕೆಗೆ ಸಮಯದ ಮಿತಿಯನ್ನು ಸ್ಪಷ್ಟವಾಗಿ ಹೇಳಿ. ವಿದ್ಯಾರ್ಥಿಗಳು ನಿಲ್ಲಿಸುವಂತೆ ಸೂಚಿಸಲು ಕೈ ಸನ್ನೆ ಅಥವಾ ಬೆಲ್ ಮಾಡುವಿರಿ ಎಂಬುದನ್ನು ಮುಂಚಿತವಾಗಿಯೇ ತಿಳಿಸಿ.
6. ವಿದ್ಯಾರ್ಥಿಗಳನ್ನು ಜೋಡಿಯಲ್ಲಿ ಕೂರಿಸಿ. ಜೋಡಿಯಲ್ಲಿ ಯಾರೊಬ್ಬರೂ ಹೆಚ್ಚಿನ ಪ್ರಭಾವ ಬೀರದಂತೆ ಅಥವಾ ಪ್ರಭಾವಕ್ಕೊಳಗಾಗದಂತೆ ಎಚ್ಚರವಹಿಸಲು ಮುಂಚಿತವಾಗಿಯೇ ಆಲೋಚಿಸಿ.
7. ಸಾಧ್ಯವಾದರೆ, ವಿದ್ಯಾರ್ಥಿಗಳನ್ನು ಕೊಠಡಿಯ ಬೇರೆ ಬೇರೆ ಭಾಗಗಳಲ್ಲಿ ಹಾಗೂ ಕೆಲವರನ್ನು ಹೊರಗೂ ಕೂರಿಸಿ.
8. ಬೇಗ ಮುಗಿಸುವ ಜೋಡಿಗಳಿಗೆ ಒಂದೆರೆಡು ಹೆಚ್ಚು ಚಟುವಟಿಕೆಗಳನ್ನು ಯೋಜಿಸಿಕೊಂಡಿರಿ.
9. ವಿದ್ಯಾರ್ಥಿಗಳು ಕೆಲಸದಲ್ಲಿ ತೊಡಗಿರುವಾಗ ಪರಿವೀಕ್ಷಿಸಿ. ತೊಡಕುಗಳಿದ್ದರೆ ಗುರುತಿಸಿ, ಆಲಿಸಿ, ಅಗತ್ಯವಿದ್ದರೆ ಸಹಾಯ ಮಾಡಿ.
10. ಚಟುವಟಿಕೆಯ ಸಮಯದಲ್ಲಿ, ಕೆಲವು ವಿದ್ಯಾರ್ಥಿಗಳನ್ನು ಮೌಲ್ಯಾಂಕನ ಮಾಡಿ. ಮುಂದಿನ ಪಾಠಗಳಲ್ಲಿ ಉಳಿದವರ ಮೌಲ್ಯಾಂಕನ ಮಾಡುವ ಗುರಿ ಹೊಂದಿದ್ದರೆ ಒಳ್ಳೆಯದು.
11. ಹಿಮ್ಮಾಹಿತಿಗಾಗಿ ಸಮಯ ಇಟ್ಟುಕೊಳ್ಳಿ. ಪಾಠದ ಕೊನೆಯಲ್ಲಿ ಅಥವಾ ಮರುದಿನ ಕೆಲವು ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ಹಂಚಿಕೊಳ್ಳಲಿ. ಜೋಡಿಕೆಲಸ ಪ್ರಸ್ತುತಪಡಿಸುವಿಕೆ ಮತ್ತು ಆಲಿಸುವಿಕೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ. ಹಾಗೆಯೇ ಒಬ್ಬರು ಇನ್ನೊಬ್ಬರ ಬರವಣಿಗೆ ಕಾರ್ಯವನ್ನು ಓದುವುದಕ್ಕೆ ಸಹ ಅವಕಾಶಗಳಿರುತ್ತವೆ.

### ಚಟುವಟಿಕೆ 3: ಜೋಡಿಕೆಲಸದ ಅನುಕೂಲ ಮತ್ತು ಅನಾನುಕೂಲಗಳು

ನೀವು ಜೋಡಿಕೆಲಸವನ್ನು ಕೈಗೊಂಡ ಮೇಲೆ, ಹೇಗಾಯಿತೆಂದು ವಿಮರ್ಶೆ ಮಾಡಿ. ಸಾಧ್ಯವಾದರೆ, ನಿಮ್ಮ ಸಹೋದ್ಯೋಗಿಯೊಂದಿಗೆ ಅನುಭವ ಹೇಳಿಕೊಳ್ಳಿ. ಕೋಷ್ಟಕ 1ರಲ್ಲಿನ ಹೇಳಿಕೆಗಳಿಗೆ ಸರಿ ಗುರುತು (✓) ಹಾಕಿ, ನಿಮ್ಮದೇ ಹೆಚ್ಚಿನ ಹೇಳಿಕೆಗಳನ್ನು ಸೇರಿಸಿ.

***ಕೋಷ್ಟಕ 1:*** *ಜೋಡಿಕೆಲಸದ ಅನುಕೂಲ ಮತ್ತು ಅನಾನುಕೂಲಗಳು*

| ಜೋಡಿಕೆಲಸದ ಲಾಭಗಳು | | ಜೋಡಿಕೆಲಸದ ತೊಡಕುಗಳು | |
|---|---|---|---|
| 'ಸಾಂಪ್ರದಾಯಿಕ' ಪಾಠಕ್ಕಿಂತ ತರಗತಿಯಲ್ಲಿ ವಿದ್ಯಾರ್ಥಿ ಮಾತಿಗೆ ಹೆಚ್ಚು ಸಮಯ ಸಿಗುತ್ತದೆ. | | ವಿದ್ಯಾರ್ಥಿಗಳಿಗೆ ಜೋಡಿಯಲ್ಲಿ ಕೆಲಸ ಮಾಡುವುದು ಅಭ್ಯಾಸವಾಗುವ ತನಕ ಹೆಚ್ಚಿನ ಸಮಯ ಬೇಕಾಗುತ್ತದೆ. | |
| ಅಷ್ಟಾಗಿ ಪರಸ್ಪರ ಗೊತ್ತಿಲ್ಲದಿರುವ ವಿದ್ಯಾರ್ಥಿಗಳ ನಡುವೆ ಧನಾತ್ಮಕ ಸಂಪರ್ಕ ಏರ್ಪಡಿಸಿ ಸಾಮಾಜಿಕ ಕಲಿಕೆ ಮತ್ತು ಸಹಕಾರವನ್ನು ಪ್ರೋತ್ಸಾಹಿಸುತ್ತದೆ. | | ಜೋಡಿಗಳು ತಮಗೆ ಕೊಟ್ಟ ಕಾರ್ಯ ಬಿಟ್ಟು ಬೇರೆಯದರ ಕುರಿತು ಮಾತಾಡಬಹುದು. | |
| ಒಂದೇ ಕಾರ್ಯಕ್ಕೆ ವಿಭಿನ್ನ ಕಲ್ಪನಾತ್ಮಕ ಉತ್ಪನ್ನ/ಫಲಿತವನ್ನು ನೀಡುತ್ತದೆ. | | ಅತಿ ಹೆಚ್ಚಿನ ಗಲಾಟೆ | |
| ವಿದ್ಯಾರ್ಥಿಗಳು ಕಾರ್ಯಮಗ್ನರಾಗಿರುವಾಗಲೇ ಪರಿವೀಕ್ಷಿಸಿ, ಸಹಾಯ ಮಾಡಲು ಅವಕಾಶಗಳಿರುತ್ತವೆ. | | ಜೊತೆಗಾರರು ಯಾವಾಗಲೂ ಪರಸ್ಪರ ಹೊಂದಿಕೊಂಡು ಹೋಗುವುದಿಲ್ಲ. | |
| | | ಜೋಡಿಗಳು ಬೇರೆ ಬೇರೆ ಸಮಯಕ್ಕೆ ಕಾರ್ಯ ಪೂರ್ತಿ ಮಾಡುತ್ತಾರೆ. | |
| | | ಶಿಕ್ಷಕರಿಗೆ ಅತಿ ಹೆಚ್ಚಿನ ಅವಧಾನ ಮತ್ತು ಜಾಗರೂಕತೆ ಬೇಕು. | |
| | | | |
| | | | |

ಬಹುಶಃ ವಿದ್ಯಾರ್ಥಿಗಳಿಗೆ ಜೋಡಿಕೆಲಸದ ಲಾಭಗಳನ್ನು ಅವರ ಮನೆಭಾಷೆಯಲ್ಲಿ ವಿವರಿಸುವ ಮೂಲಕ ಹಾಗೂ ನಿಧಾನವಾಗಿ ಇದನ್ನು ಪರಿಚಯಿಸುವ ಮೂಲಕ ನೀವು ಅನುಭವಿಸಿದ ಕೆಲವು ಸಮಸ್ಯೆಗಳನ್ನು ಕಡಿಮೆ ಮಾಡಿಕೊಳ್ಳಬಹುದು. ನಿಮ್ಮ ತಿಳುವಳಿಕೆಯನ್ನು ಆಧರಿಸಿ, ವಿವಿಧ ರಿತಿಯಲ್ಲಿ ಕಾರ್ಯ ನಿರ್ವಹಿಸಲು ತುಂಬಾ ಸಹಾಯಕವಾದ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಜೋಡಿಯಾಗಿ ಕೂರಿಸುವುದನ್ನು ಪ್ರತಿ ಪಾಠಕ್ಕೂ ಮುಂಚೆಯೇ ಯೋಜಿಸಿ. ಅಲ್ಲದೇ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು (ಧನಾತ್ಮಕ ಮತ್ತು ಋಣಾತ್ಮಕ) ಕೇಳಿ. ಆದರೆ ಈ ರೀತಿಯ ಚರ್ಚೆಗಳನ್ನು ಸೂಕ್ಷ್ಮ ಮನಸ್ಸಿನಿಂದ ನಿರ್ವಹಿಸಿ.

## 4 ಸಾರಾಂಶ

ಈ ಘಟಕ ನಿಮ್ಮ ಭಾಷಾ ಪಾಠಗಳಲ್ಲಿ ಜೋಡಿಕೆಲಸವನ್ನು ಯೋಜಿಸುವ ಮತ್ತು ನಿರ್ವಹಿಸುವ ವಿಧಾನಗಳ ಕುರಿತು ಗಮನ ಹರಿಸಿದೆ. ಹಲವು ರೀತಿಯ ಚಟುವಟಿಕೆಗಳಲ್ಲಿ ಸ್ನೇಹಪರ, ಸಹಯೋಗ ಕಲಿಕೆಗಾಗಿ ಅವಕಾಶಗಳನ್ನು ಒದಗಿಸುವ ಮೂಲಕ ನಿಮ್ಮ ಬೋಧನಾ ಭಂಡಾರದಲ್ಲಿ ಜೋಡಿಕೆಲಸವು ಒಂದು ತುಂಬಾ ಪರಿಣಾಮಕಾರಿಯಾದ ಸಾಧನವಾಗಬಹುದು.

# ಸಂಪನ್ಮೂಲಗಳು

## ಸಂಪನ್ಮೂಲ 1: ಜೋಡಿಕೆಲಸದ ಬಳಕೆ

ನಿತ್ಯಜೀವನದಲ್ಲಿ ಜನರು ಜೊತೆಗೂಡಿ ಕೆಲಸ ಮಾಡುತ್ತಾರೆ, ಮಾತನಾಡುತ್ತಾರೆ, ಆಲಿಸುತ್ತಾರೆ ಹಾಗೂ ಇತರರು ಏನು ಮಾಡುತ್ತಾರೆ, ಹೇಗೆ ಮಾಡುತ್ತಾರೆ ಎಂಬುದನ್ನು ಗಮನಿಸುತ್ತಾರೆ. ಈ ರೀತಿಯಾಗಿ ಜನ ಕಲಿಯುತ್ತಾರೆ. ನಾವು ಇತರರೊಂದಿಗೆ ಮಾತನಾಡಿದಾಗ, ಹೊಸ ವಿಚಾರಗಳು ಮತ್ತು ಮಾಹಿತಿಯನ್ನು ಪಡೆಯುತ್ತೇವೆ. ತರಗತಿಗಳಲ್ಲಿ, ಎಲ್ಲವೂ ಶಿಕ್ಷಕ-ಕೇಂದ್ರಿತವಾಗಿದ್ದರೆ, ಆಗ ಅನೇಕ ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯನ್ನು ಪ್ರದರ್ಶಿಸಲು ಅಥವಾ ಪ್ರಶ್ನೆ ಕೇಳಲು ಸಾಕಷ್ಟು ಸಮಯ ಸಿಗುವುದಿಲ್ಲ. ಕೆಲವು ವಿದ್ಯಾರ್ಥಿಗಳು ಸಂಕ್ಷಿಪ್ತ ಉತ್ತರಗಳನ್ನಷ್ಟೆ ಕೊಡಬಹುದು ಹಾಗೂ ಇನ್ನು ಕೆಲವರು ಏನನ್ನೂ ಹೇಳದೇ ಇರಬಹುದು. ದೊಡ್ಡ ತರಗತಿಗಳಲ್ಲಿ, ಪರಿಸ್ಥಿತಿ ಇನ್ನೂ ಕೆಟ್ಟದಾಗಿದ್ದು, ಕೆಲವೇ ಕೆಲವು ವಿದ್ಯಾರ್ಥಿಗಳು ಮಾತ್ರ ಮಾತನಾಡುತ್ತಾರೆ.

**ಜೋಡಿಕೆಲಸವನ್ನು ಏಕೆ ಉಪಯೋಗಿಸಬೇಕು?**

ಜೋಡಿಕೆಲಸವು ವಿದ್ಯಾರ್ಥಿಗಳು ಮಾತನಾಡಿ ಕಲಿಯಲು ಇರುವ ಒಂದು ಸಹಜ ವಿಧಾನ. ಇದು ಅವರಿಗೆ ಆಲೋಚಿಸಲು, ವಿಚಾರಗಳು ಮತ್ತು ಹೊಸಭಾಷೆಯನ್ನು ಅಭ್ಯಾಸ ಮಾಡಲು ಅವಕಾಶ ಮಾಡಿಕೊಡುತ್ತದೆ. ಇದು ಹೊಸ ಕೌಶಲಗಳು ಮತ್ತು ಪರಿಕಲ್ಪನೆಗಳನ್ನು ರೂಢಿಗತ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಅಲ್ಲದೆ ದೊಡ್ಡ ತರಗತಿಗಳಿಗೂ ಉಪಯುಕ್ತವಾದದ್ದು.

ಜೋಡಿಕೆಲಸವು ಎಲ್ಲ ವಿಷಯಗಳಿಗೂ ಹಾಗೂ ಎಲ್ಲ ವಯೋಮಾನದವರಿಗೂ ಸೂಕ್ತವಾಗಿರುತ್ತದೆ. ಇದು ವಿಶೇಷವಾಗಿ ಬಹುಭಾಷೆಯ, ಬಹುವರ್ಗದ ತರಗತಿಗಳಲ್ಲಿ ಉಪಯುಕ್ತ. ಏಕೆಂದರೆ ಪರಸ್ಪರ ಸಹಾಯ ಮಾಡಲು ಜೋಡಿಗಳಾಗಿ ವ್ಯವಸ್ಥೆ ಮಾಡಬಹುದು. ನೀವು ನಿರ್ದಿಷ್ಟ ಕಾರ್ಯಗಳನ್ನು ಯೋಜಿಸಿ, ಕಲಿಯುತ್ತಿರುವ ಮತ್ತು ಪ್ರಗತಿ ಹೊಂದುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಮಾಡಲು ಜೋಡಿಗಳನ್ನು ನಿರ್ವಹಿಸುವ ವ್ಯವಸ್ಥೆಯನ್ನು ಸ್ಥಾಪಿಸಿದಾಗ ಇದು ಅತ್ಯುತ್ತಮವಾಗಬಲ್ಲದು. ವಿದ್ಯಾರ್ಥಿಗಳು ಜೋಡಿಗಳಲ್ಲಿ ಕುಳಿತು ಕೆಲಸ ಮಾಡಲು ರೂಢಿ ಮಾಡಿಕೊಂಡು, ಸಂತಸದಾಯಕವಾಗಿ ಕಲಿಯುವುದನ್ನು ನೋಡಲಿದ್ದೀರಿ.

**ಜೋಡಿಕೆಲಸಕ್ಕಾಗಿ ಕಾರ್ಯಗಳು (Tasks)**

ಕಲಿಕೆಯ ಉದ್ದೇಶಿತ ಫಲಿತವನ್ನು ಆಧರಿಸಿ, ಜೋಡಿಕೆಲಸದ ವಿವಿಧ ಕಾರ್ಯಗಳನ್ನು ನೀವು ಉಪಯೋಗಿಸಬಹುದು. ಜೋಡಿಕೆಲಸದ ಕಾರ್ಯವು ಸ್ಪಷ್ಟ ಮತ್ತು ಸೂಕ್ತವಾಗಿರಬೇಕು. ಆಗ ಒಂಟಿಯಾಗಿ ಕಾರ್ಯನಿರ್ವಹಿಸುವುದಕ್ಕಿಂತ ಜತೆಯಾಗಿ ನಿರ್ವಹಿಸಿದರೆ ಹೆಚ್ಚು ಕಲಿಯಲು ನೆರವಾಗುತ್ತದೆ. ತಮ್ಮ ಐಡಿಯಾಗಳ ಕುರಿತು ಮಾತನಾಡುವ ಮೂಲಕ ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಅವುಗಳ ಕುರಿತು ಆಲೋಚಿಸುತ್ತಾ, ಅವುಗಳನ್ನು ಇನ್ನಷ್ಟು ಉತ್ತಮಪಡಿಸುತ್ತಾರೆ.

ಜೋಡಿಕೆಲಸದ ಕಾರ್ಯಗಳು ಇವುಗಳನ್ನು ಒಳಗೊಂಡಿರಬಹುದು:

- **'ಆಲೋಚಿಸಿ-ಜೊತೆಯಾಗಿ-ಹಂಚಿಕೊಳ್ಳಿ'**: ವಿದ್ಯಾರ್ಥಿಗಳು ಒಂದು ಸಮಸ್ಯೆ ಅಥವಾ ವಿಚಾರದ ಕುರಿತು ಮೊದಲು ತಮ್ಮಷ್ಟಕ್ಕೆ ತಾವೇ ಆಲೋಚಿಸಿ, ನಂತರ ಜೋಡಿಗಳಲ್ಲಿ ಅದಕ್ಕೆ ಸಾಧ್ಯವಿರುವ ಉತ್ತರಗಳನ್ನು ಪತ್ತೆಹಚ್ಚಿದ ನಂತರ ಇತರ ಎಲ್ಲಾ ವಿದ್ಯಾರ್ಥಿಗಳೊಂದಿಗೆ ಅವುಗಳನ್ನು ಹಂಚಿಕೊಳ್ಳುತ್ತಾರೆ. ಇದನ್ನು ಅಕ್ಷರ ಜ್ಞಾನ, ಲೆಕ್ಕ, ವಸ್ತುಗಳ ವರ್ಗೀಕರಣ ಅಥವಾ ಅನುಕ್ರಮಗೊಳಿಸುವಿಕೆ, ವಿವಿಧ ಅಭಿಪ್ರಾಯಗಳನ್ನು ನೀಡುವುದು, ಕಥೆಯಲ್ಲಿ ಪಾತ್ರಗಳಂತೆ ನಟನೆ ಹೀಗೆ ಇವುಗಳಿಗಾಗಿ ಬಳಸಬಹುದು.
- **ಮಾಹಿತಿಯನ್ನು ಹಂಚಿಕೊಳ್ಳುವುದು:** ಅರ್ಧ ತರಗತಿಗೆ ಒಂದು ವಿಷಯ ವಸ್ತುವಿನ ಒಂದು ಅಂಶದ ಕುರಿತ ಮಾಹಿತಿಯನ್ನು ಕೊಟ್ಟು. ಇನ್ನರ್ಧ ತರಗತಿಗೆ ಅದೇ ವಿಷಯ ವಸ್ತುವಿನ ಬೇರೆ ಅಂಶದ ಕುರಿತ ಮಾಹಿತಿಯನ್ನು ಕೊಡುವುದು. ನಂತರ ಅವರು ಜೋಡಿಯಲ್ಲಿ ಕಾರ್ಯಮಾಡಿ ಒಂದು ಸಮಸ್ಯೆಗೆ ಪರಿಹಾರ ಹೇಳಲು ಅಥವಾ ಒಂದು ನಿರ್ಧಾರಕ್ಕೆ ಬರಲು ತಮ್ಮ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ.

- **ಆಲಿಸುವಿಕೆಯಂತಹ ಕೌಶಲಗಳನ್ನು ಅಭ್ಯಾಸ ಮಾಡುವುದು:** ಒಬ್ಬ ವಿದ್ಯಾರ್ಥಿಯು ಕಥೆಯನ್ನು ಓದಿದರೆ, ಇನ್ನೊಬ್ಬ ಪ್ರಶ್ನೆಗಳನ್ನು ಕೇಳುವುದು; ಒಬ್ಬರು ಒಂದು ಆಯ್ದ ಲೇಖನ ಓದಿದರೆ, ಮತ್ತೊಬ್ಬಳು ಅದನ್ನು ಬರೆದುಕೊಳ್ಳುವುದು; ಒಬ್ಬ ವಿದ್ಯಾರ್ಥಿ ಒಂದು ಚಿತ್ರವನ್ನು ವರ್ಣಿಸಿದರೆ, ಮತ್ತೊಬ್ಬ ವಿವರಣೆ ಆಧರಿಸಿ, ಚಿತ್ರ ಕಂಡುಹಿಡಿಯುವುದು.
- **ಸೂಚನೆಗಳನ್ನು ಅನುಸರಿಸುವುದು:** ಒಬ್ಬ ವಿದ್ಯಾರ್ಥಿ/ನಿ ಇನ್ನೊಬ್ಬರಿಗೆ ಕಾರ್ಯವನ್ನು ಪೂರ್ಣಗೊಳಿಸಲು ಸೂಚನೆಗಳನ್ನು ಓದುವುದು.
- **ಕಥೆ ಹೇಳುವಿಕೆ ಅಥವಾ ಪಾತ್ರಾಭಿನಯ:** ವಿದ್ಯಾರ್ಥಿಗಳು ತಾವು ಕಲಿಯುವ ಭಾಷೆಯಲ್ಲಿ ಜೋಡಿಯಲ್ಲಿ ಕಥೆ ಕಟ್ಟುವುದು ಅಥವಾ ಸಂಭಾಷಣೆಯನ್ನು ಬರೆಯುವುದು.

**ಎಲ್ಲರ ಒಳಗೊಳ್ಳುವಿಕೆಗಾಗಿ ಜೋಡಿಗಳ ನಿರ್ವಹಣೆ**

ಜೋಡಿ ಕೆಲಸ ಎಂದರೆ ಎಲ್ಲರನ್ನು ಒಳಗೊಳ್ಳುವುದಾಗಿದೆ. ವಿದ್ಯಾರ್ಥಿಗಳು ಭಿನ್ನವಾಗಿರುವುದರಿಂದ, ಅವರು ಏನನ್ನು ಮಾಡಬೇಕು, ಏನನ್ನು ಕಲಿಯುತ್ತಾರೆ ಹಾಗೂ ಅವರಿಂದ ಏನನ್ನು ನಿರೀಕ್ಷಿಸಲಾಗುತ್ತದೆ ಎಂದು ಪ್ರತಿಯೊಬ್ಬರೂ ತಿಳಿದಿರುವಂತೆ ಜೋಡಿಗಳನ್ನು ನಿರ್ವಹಿಸಬೇಕು. ನಿಮ್ಮ ತರಗತಿಯಲ್ಲಿ ಜೋಡಿಕೆಲಸವನ್ನು ರೂಢಿಗತಗೊಳಿಸಲು ಈ ಕೆಳಗಿನವುಗಳನ್ನು ಅನುಸರಿಸಿ:

- ವಿದ್ಯಾರ್ಥಿಗಳು ಕಾರ್ಯನಿರತರಾಗುವಂತೆ ಜೋಡಿ ಮಾಡಿ. ವಿದ್ಯಾರ್ಥಿಗಳು ಕೆಲವೊಮ್ಮೆ ತಮ್ಮ ಸ್ನೇಹಿತ/ತೆಯೊಂದಿಗೆ ಸೇರಿ ಕಾರ್ಯನಿರತರಾಗುತ್ತಾರೆ; ಕೆಲವೊಮ್ಮೆ ಇಲ್ಲ. ಅವರ ಕಲಿಕೆಯನ್ನು ಹೆಚ್ಚಿಸುವುದಕ್ಕಾಗಿಯಷ್ಟೇ ನೀವು ಜೋಡಿಯನ್ನು ನಿರ್ಧರಿಸುತ್ತೀರಿ ಎಂಬುದನ್ನು ಅರ್ಥ ಮಾಡಿಸಿ.
- ಹೆಚ್ಚು ಸವಾಲಾಗಿಸಲು, ಕೆಲವೊಮ್ಮೆ ನೀವು ಬೇರೆ ಬೇರೆ ಸಾಮರ್ಥ್ಯದ ಹಾಗೂ ಬೇರೆ ಬೇರೆ ಭಾಷೆಯವರಾದ ವಿದ್ಯಾರ್ಥಿಗಳನ್ನು ಜೋಡಿಯಾಗಿಸಿ, ಅವರು ಪರಸ್ಪರ ನೆರವಾಗುವಂತೆ ಮಾಡಿ; ಕೆಲವೊಮ್ಮೆ ಒಂದೇ ಮಟ್ಟದ ವಿದ್ಯಾರ್ಥಿಗಳು ಜೋಡಿ ಮಾಡಿ.
- ನಿಮ್ಮ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ನೀವು ತಿಳಿಯಲು, ಅದರಂತೆ ಜೋಡಿ ಮಾಡಲು ದಾಖಲೆಗಳನ್ನಿಡಿ.
- ಆರಂಭದಲ್ಲಿ, ಜನ ಎಲ್ಲೆಲ್ಲಿ ಸಹಯೋಗದಿಂದ ಕಾರ್ಯ ಮಾಡುತ್ತಾರೋ, ಅಂದರೆ ಸಮುದಾಯ -ಕುಟುಂಬ ಮೊದಲಾದ ಉದಾಹರಣೆಗಳೊಂದಿಗೆ ಜೋಡಿಕೆಲಸದ ಉಪಯೋಗಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿ.
- ಮೊದಲ ಕಾರ್ಯಗಳು ಸಂಕ್ಷಿಪ್ತ ಮತ್ತು ಸ್ಪಷ್ಟವಾಗಿರಲಿ.
- ನಿಮ್ಮ ನಿರೀಕ್ಷೆಯಂತೆ ವಿದ್ಯಾರ್ಥಿಗಳು ಜೋಡಿಗಳಲ್ಲಿ ಕೆಲಸ ಮಾಡುವುದನ್ನು ಪರಿವೀಕ್ಷಿಸಿ.
- ಜೋಡಿ ವಿದ್ಯಾರ್ಥಿಗಳಿಗೆ ಪಾತ್ರಗಳು ಅಥವಾ ಜವಾಬ್ದಾರಿಗಳನ್ನು ನೀಡಿ. ಕಥೆಯಲ್ಲಿನ ಎರಡು ಪಾತ್ರಗಳು ಅಥವಾ ಸರಳವಾಗಿ '1' ಮತ್ತು '2' ಅಥವಾ 'A' ಮತ್ತು 'B' ಎಂದು ನೀಡಬಹುದು. ಇದನ್ನು ಅವರು ಜೋಡಿಯಲ್ಲಿ ಕುಳಿತುಕೊಳ್ಳುವ ಮುಂಚೆಯೇ ಮಾಡುವುದರಿಂದ, ಪರಸ್ಪರ ಕೇಳಿಸಿಕೊಳ್ಳುವರು.
- ವಿದ್ಯಾರ್ಥಿಗಳು ಪರಸ್ಪರ ಎದುರು - ಬದುರು ಕುಳಿತುಕೊಳ್ಳುವಂತೆ ನೋಡಿಕೊಳ್ಳಿ. ಜೋಡಿ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ಪ್ರತಿ ಕಾರ್ಯಕ್ಕೆ (task) ಎಷ್ಟು ಸಮಯ ಎಂದು ಹೇಳಿ, ಆಗಾಗ್ಗೆ ನೆನಪಿಸಬೇಕು. ಕಾರ್ಯದಲ್ಲಿ ನಿರತರಾಗಿ ಮುಂದುವರಿಯುತ್ತಿರುವ ಜೋಡಿಗಳನ್ನು ಪ್ರಶಂಸಿಸಿ. ವಿದ್ಯಾರ್ಥಿಗಳು ತಾವೇ ಕುಳಿತು ಅರ್ಥ ಮಾಡಿಕೊಂಡು ಪರಿಹಾರ ಕಂಡುಕೊಳ್ಳಲು ಸಮಯ ಕೊಡಿ. ವಿದ್ಯಾರ್ಥಿಗಳು ಆಲೋಚಿಸಿ, ತಾವು ಏನು ಮಾಡಬಲ್ಲರೆಂದು ತೋರಿಸುವ ಮುನ್ನವೇ, ಬಹುಬೇಗ ಕಾರ್ಯದಲ್ಲಿ ತೊಡಗಿಕೊಂಡು ಬಿಡಬೇಕೆಂದು ನಮಗೆ ಅನ್ನಿಸಬಹುದು. ಪ್ರತಿಯೊಬ್ಬರೂ ಮಾತನಾಡಿ, ಕಾರ್ಯ ನಿರ್ವಹಿಸುವಂತಹ ವಾತಾವರಣವನ್ನು ಬಹುತೇಕ ವಿದ್ಯಾರ್ಥಿಗಳು ಇಷ್ಟಪಡುತ್ತಾರೆ. ನೀವು ತರಗತಿ ವೀಕ್ಷಿಸುತ್ತಾ, ಆಲಿಸುತ್ತಾ ತಿರುಗಾಡುತ್ತಿದ್ದಂತೆ, ಪರಸ್ಪರ ಆರಾಮವಾಗಿ ಹೊಂದಿಕೊಳ್ಳುವವರ, ಹೊಂದಿಕೊಳ್ಳದೆ ಒಂಟಿಯಾಗಿರುವವರ, ಸಾಮಾನ್ಯ ತಪ್ಪುಗಳ, ಒಳ್ಳೆಯ ವಿಚಾರಗಳ ಮತ್ತು ಸಾರಾಂಶದ ಟಿಪ್ಪಣಿಯನ್ನು ಮಾಡಿಕೊಳ್ಳಿ.

ಕೊನೆಯಲ್ಲಿ, ವಿದ್ಯಾರ್ಥಿಗಳ ಕಾರ್ಯಕ್ಕೆ ಸಂಪರ್ಕ ಕಲ್ಪಿಸುವ ಪಾತ್ರ ನಿಮ್ಮದು. ಕೆಲವು ಜೋಡಿಗಳಿಂದ ಅವರ ಕಾರ್ಯಪ್ರದರ್ಶನ ಮಾಡಿಸಬಹುದು ಅಥವಾ ನೀವೇ ಅದನ್ನು ಸಾರಾಂಶೀಕರಣ ಮಾಡಬಹುದು. ಜೊತೆಯಲ್ಲಿ ಕಾರ್ಯ ನಿರ್ವಹಿಸುವಾಗ ವಿದ್ಯಾರ್ಥಿಗಳು ಸಾಧನೆಯ ಭಾವವನ್ನು ಅನುಭವಿಸಲು ಇಚ್ಛಿಸುತ್ತಾರೆ. ಪ್ರತಿ ಜೋಡಿಯೂ ನಿಮಗೆ ವರದಿ ಒಪ್ಪಿಸುವ ಅಗತ್ಯವಿಲ್ಲ. ಇದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಆದರೆ, ನಿಮ್ಮ ವೀಕ್ಷಣೆಯ ಆಧಾರದ ಮೇಲೆ ಬೇರೆಯವರ ಕಲಿಕೆಗೂ ಸಹಾಯವಾಗುವಂತೆ ಧನಾತ್ಮಕ ಕೊಡುಗೆ

ನೀಡುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ. ಹಿಂಜರಿಕೆ ಸ್ವಭಾವದ ವಿದ್ಯಾರ್ಥಿಗಳಿಗೆ ತಮ್ಮ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲು ಇದು ಒಂದು ಅವಕಾಶವಾಗಬಹುದು.

ನೀವು ವಿದ್ಯಾರ್ಥಿಗಳಿಗೆ ಒಂದು ಸಮಸ್ಯೆಯನ್ನು ಪರಿಹರಿಸಲು ಕೊಟ್ಟಿದ್ದರೆ, ನೀವು ಮಾದರಿ ಉತ್ತರವನ್ನು ಕೊಟ್ಟು, ತಮ್ಮ ಉತ್ತರಗಳನ್ನು ಜೋಡಿಯಲ್ಲಿ ಚರ್ಚಿಸಿ, ಉತ್ತಮಪಡಿಸಿಕೊಳ್ಳುವಂತೆ ಹೇಳಬಹುದು. ಇದು ತಮ್ಮ ಕಲಿಕೆಯ ಕುರಿತು ಆಲೋಚನೆ ಮಾಡುವಂತೆ ಹಾಗೂ ತಮ್ಮ ತಪ್ಪುಗಳಿಂದ ಕಲಿಯುವಂತೆ ಮಾಡುತ್ತದೆ.

ಜೋಡಿ ಕೆಲಸವನ್ನು ಸಂಘಟಿಸುವುದು ನಿಮಗೆ ಹೊಸದಾಗಿದ್ದಲ್ಲಿ, ಕಾರ್ಯ, ಸಮಯ ಮತ್ತು ಜೋಡಿಗಳಿಗೆ ಸಂಬಂಧಿಸಿದಂತೆ ಬದಲಾವಣೆ ಮಾಡಿಕೊಳ್ಳಬೇಕಾಗಿದ್ದಲ್ಲಿ ಟಿಪ್ಪಣಿ ಮಾಡಿಕೊಳ್ಳುವುದು ಮುಖ್ಯ. ಏಕೆಂದರೆ, ಹೀಗೆ ನೀವು ಕಲಿತು, ನಿಮ್ಮ ಬೋಧನೆಯನ್ನು ಉತ್ತಮಪಡಿಸಿಕೊಳ್ಳುತ್ತೀರಿ. ಯಶಸ್ವಿ ಜೋಡಿ ಕೆಲಸಗಳನ್ನು ಸಂಘಟಿಸುವುದಕ್ಕೆ ಸ್ಪಷ್ಟ ಸೂಚನೆಗಳು, ಉತ್ತಮ ಸಮಯ ನಿರ್ವಹಣೆ ಹಾಗೂ ಸಂಕ್ಷಿಪ್ತ ಸಾರಾಂಶೀಕರಣ ಬಹಳ ಅಗತ್ಯ. ಇವುಗಳಿಗೆ ಅಭ್ಯಾಸ ಬೇಕಾಗುತ್ತದೆ.

## ಹೆಚ್ಚುವರಿ ಸಂಪನ್ಮೂಲಗಳು

- Some helpful websites referring to paired reading:
  - http://www.readingrockets.org/strategies/paired_reading
  - http://www.moray.gov.uk/moray_standard/page_62204.html
- Some helpful websites referring to paired work in the classroom:
  - http://www.teachingenglish.org.uk/language-assistant/primary-tips/working-pairs-groups

## ಗ್ರಂಥಸೂಚಿ


Glasner, E. and Mahmout, U. (2005) 'Putting paired learning into practice in the primary classroom' (online), University of Newcastle upon Tyne/Campaign for Learning. Available from: http://www.campaign-for-learning.org.uk/cfl/assets/documents/CaseStudies/L2L_cs_fleecefield_ph3.pdf (accessed 18 November 2014).

Jolliffe, W. (2007) *Cooperative Learning in the Classroom: Putting it into Practice*. London: Sage Publications.


## ಕೃತಜ್ಞತೆಗಳು


This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.



Video (including video stills): thanks are extended to the teacher educators, headteachers, teachers and students across India who worked with The Open University in the productions.